ಅಯ್ಯೋ ನಮ್ಮಪ್ಪ, ನಮ್ಮ ಬಾವ ಮೊಮ್ಮಗಳ ಮದುವೆಗೆ ದುಡ್ಡಿನ ಸಹಾಯ ಮಾಡುವಷ್ಟು ಒಳ್ಳೆಯವನಾಗಿಬಿಟ್ಟನಾ ಎಂದು ಶೇಖರನೂ, ಅವನ ಮಾಮನೂ ಕಣ್ಣು ಬಾಯಿ ಬಿಟ್ಟುಕೊಂಡು ನೋಡುವಷ್ಟರಲ್ಲಿ ನಾಯಿ ಬಾಲ ಯಾವತ್ತಿದ್ದರೂ ಡೊಂಕೇ ಎಂಬಂತೆ 'ನನಗೆ ಪರಿಚಯದವರೊಬ್ಬರು ಕಡಿಮೆ ಬಡ್ಡಿಗೆ ಸಾಲ ಕೊಡ್ತಾರೆ ಬೇಕಿದ್ರೆ ಹೇಳು ಕೊಡುಸ್ತೀನಿ, ನನ್ನ ಮೇಲೆ ನಂಬಿಕೆ ಇಟ್ಟು ಮದುವೆಗೆ ಒಪ್ಪಿದ್ದಾರೆ ನೀನೇನಾದರೂ ಜಿಪುಣತನ ಮಾಡಿ ನನ್ನ ಮರ್ಯಾದೆ ಕಳೀಬೇಡ' ಎಂದು ತನ್ನ ವಕ್ರ ಬುದ್ಧಿ ತೋರಿಸಿಯೇ ಬಿಟ್ಟ. ಅವನ ವರಸೆಗೆ ಉಂಗುಷ್ಟದಿಂದ ನೆತ್ತಿಯವರೆಗೂ ಕೋಪ ಹತ್ತಿದರೂ ಎಲ್ಲಿ ಮದುವೆಗೆ ಬಾರದೇ ತೊಂದರೆ ಕೊಡುತ್ತಾನೋ, ದುಡ್ಡು ಗಿಡ್ಡು ಕೀಳುತ್ತಾನೋ ಎಂಬ ಆತಂಕಕ್ಕೆ ಇಬ್ಬರೂ ಮಾತನಾಡದೇ ಹೊರಟು ಬಂದಿದ್ದರು.

ಮಲ್ಲಿಕಾರ್ಜುನ ಹೀಗೆಲ್ಲಾ ಅಂದದ್ದು ಅಣ್ಣನಿಂದ ಸುನಂದಾಳಿಗೆ ಗೊತ್ತಾಗಿತ್ತು, ಅವನು ಸುಟ್ಟರೂ ತನ್ನ ಬುದ್ಧಿ ಬಿಡೋನಲ್ಲಾ ಅಂತಾ ಗೊತ್ತಿದ್ದರಿಂದ ಅವಳಿಗೆ ಏನೂ ಅನ್ನಿಸಲೇ ಇಲ್ಲ. ಅವನು ಸಿಗದೇ ದೇಶಾಂತರ ಹೋಗಿದ್ದರೆ, ಏನಾದರೂ ನೆಪ ಹೇಳಿ ಮೊಮ್ಮಗಳ ಮದುವೆ ಮಾಡಬಹುದಿತ್ತು ಆದರೆ ಗಂಡಿನ ಕಡೆಯವರಿಗೆ ಅವನು ಇಲ್ಲೇ ಎಲ್ಲೋ ಇರೋದು ಗೊತ್ತಿದ್ದರಿಂದ, ಅವನು ಬಾರದೇ ಇದ್ದರೆ ತಪ್ಪು ತಿಳಿವಳಿಕೆಯಿಂದ ಮದುವೆ ತಪ್ಪಿ ಹೋಗುವಂತಾಗಬಾರದು ಎಂದುಕೊಂಡು, ಆ ಶನಿ ಬಂದು ಹೋಗಲಿ ಅತ್ಲಾಗೆ ಅಂದುಕೊಂಡು ಸುಮ್ಮನಾದಳು.ಮದುವೆಯಹಿಂದಿನಸಂಜೆಯವರೆಗೂ ಅವನು ಅಲ್ಲಿ ಬಂದು ಓಡಾಡುತ್ತಿದ್ದುದು ಗೊತ್ತಿದ್ದರೂ ಸುನಂದಾ ಮನಸ್ಸು ಕಲ್ಲು ಮಾಡಿಕೊಂಡು ತನ್ನ ಪಾಡಿಗೆ ತಾನು ನೆಂಟರನ್ನು ಮಾತಾಡಿಸಿಕೊಂಡು, ಚಿಕ್ಕ ಪುಟ್ಟ ಕೆಲಸ ಮಾಡಿಕೊಂಡು ಓಡಾಡುತ್ತಿದ್ದಳು. ಯಾವಾಗ ಮದುಮಕ್ಕಳು ಸ್ಟೇಜ್ ಮೇಲೆ ಬಂದು ಆರತಕ್ಷತೆಗೆ ನಿಂತರೋ, ಫೋಟೊಗ್ರಾಫರ್ ಎಲ್ಲರೂ ಫ್ರೆಶ್ ಆಗಿರುವಾಗಲೇ ಫ್ಯಾಮಿಲಿ ಫೋಟೊ ತೆಗೆದುಬಿಡೋಣ ಎಂದಾಗ ಸುನಂದಳು ಮಗ ಸೊಸೆಯೊಂದಿಗೆ ನಗು ನಗುತ್ತಲೇ ವೇದಿಕೆ ಏರಿದ್ದಳು, ಗಂಡಿನ ಅಪ್ಪ ಮತ್ತೊಂದು ಕಡೆಯಿಂದ ಮಲ್ಲಿಕಾರ್ಜುನನ ಕೈ ಹಿಡಿದು ಕರೆದುಕೊಂಡು ಬಂದು ಮದುಮಕ್ಕಳು ಕೂರುವ ಸೋಫಾದಲ್ಲಿ ಕೂರಿಸಿದನೋ ಸುನಂದಾಳ ನಗುಮುಖ ಫೋಟೊಗೆ ಕಾಣಲೇ ಇಲ್ಲ. ಅಲ್ಲಿಂದ ಎದ್ದು ಹೋಗಿಬಿಡಬೇಕು ಎನಿಸುತ್ತಿದ್ದರೂ, ಸೊಸೆಯ ಕಣ್ಸನ್ನೆ ಅರಿತು, ಫೋಟೊಗ್ರಾಫರ್ ಅಜ್ಜಿ ಸ್ಮೈಲ್ ಎನ್ನುವುದನ್ನು ಕೇಳಿಯೂ ಕೇಳದಂತೆ ಒಂದೆರಡು ನಿಮಿಷ ಅವನ ಕೋಟಿನ ತುದಿಯೂ ತಾಗದಂತೆ ಕೂತಿದ್ದು ಎದ್ದು ಹೊರಟಳು.

ಇಷ್ಟೊತ್ತು ಇದ್ದ ನಿರ್ಲಿಪ್ತತೆ ಇಲ್ಲದಂತಾಗಿ ಯಾಕೋ ತಲೆ ತಿರುಗಿದಂಗಾಗುತ್ತಿದೆ ಅನ್ನೋ ನೆಪ ಹೇಳಿ ವಧುವಿನ ಕೋಣೆಗೆ ಹೋಗಿ ಮಲಗಿಬಿಟ್ಟಳು. ಸ್ವಲ್ಪ ಹೊತ್ತಾದಮೇಲೆ ಹಿರಿಯ ಹೆಣ್ಣು ಮಕ್ಕಳಿಬ್ಬರು ಬಂದು ನಾಜೂಕಾಗಿ ನಾಳೆ ಬೆಳಗ್ಗೆ ಮಲ್ಲಿಕಾರ್ಜುನನ ಜೊತೆಗೇ ತಮ್ಮ ತಾಯಿ ಮೊಮ್ಮಗಳ ಧಾರೆ ಮಾಡಬೇಕು, ಇಲ್ಲದಿದ್ದರೆ ಬೀಗರು ತಪ್ಪು ತಿಳಿಯಬಹುದು ಅಂತಾ ಶೇಖರ ಹೇಳುತ್ತಿದ್ದಾನೆ ಎಂದು ತಿಳಿಸಿದರು. ಸುನಂದಾ ಇದನ್ನು ಕಲ್ಪನೆಯೂ ಮಾಡಿಕೊಂಡಿರಲಿಲ್ಲ, ಅಷ್ಟರಲ್ಲೇ ಸೊಸೆ ಸವಿತಾ ಬಂದು ಖಡಾಖಂಡಿತವಾಗಿ ಸುನಂದಾ ಮಲ್ಲಿಕಾರ್ಜುನನ ಜೊತೆಗೇ ಧಾರೆ ಮುಹೂರ್ತ ಮಾಡಬೇಕೆಂದು ಆರ್ಡರ್ ಮಾಡಿ ಹೋದಳು. ತನ್ನಣ್ಣ, ತನ್ನಣ್ಣನ ಹೆಂಡತಿ, ಹೆಣ್ಣು ಮಕ್ಕಳು ಯಾರೆಷ್ಟೇ ಹೇಳಿದರೂ ಸುನಂದಾ ಬರೀ ಕಣ್ಣೀರು ಹಾಕಿದಳೇ ಹೊರತು ಅವರ ಮಾತಿಗೆ ಒಪ್ಪಲೇ ಇಲ್ಲ. ಬಲವಂತದಿಂದ ಒಂದಷ್ಟು ಉಂಡು ಬಂದಮೇಲೆ ಕೊನೆಗೆ ಮಗನೂ 'ನೋಡಮ್ಮಾ ನನ್ನ ಮಗಳ ಜೀವನ ಚನ್ನಾಗಿರಬೇಕು ಅಂತಾ ಇದ್ದರೆ ನೀನು ಅಯಪ್ಪನ ಜೊತೆ ಧಾರೆ ಮಾಡಲೇಬೇಕು, ಯೋಚನೆ ಮಾಡಿ ಹೇಳು' ಎಂದುಬಿಟ್ಟ.

ಇಡೀ ರಾತ್ರಿ ನಿದ್ದೆಯಿಲ್ಲದೇ ವದ್ದಾಡಿ, ಮದುವೆ ಮನೆ ಬಿಟ್ಟು ಹೋಗಿಬಿಡಲೇ ಎನಿಸಿದರೂ ತಡೆದುಕೊಂಡು, ಮನಸ್ಸಿಲ್ಲದ ಮನಸ್ಸಿನಿಂದ ಅವನ ಮುಖವನ್ನೇ ನೋಡದೇ ಮಂಟಪದ ಬಳಿ ಹೋಗಿ ಅವನು ಹಿಡಿದಿದ್ದ ಹಾಲಿನ ಚೊಂಬನ್ನು ಕಂಠದ ಬಳಿ ಬೆರಳಿನಿಂದ ಹಿಡಿದು ಸಂಗೀತಾ ಗಂಡನ ಮನೆಯಲ್ಲಿ ಸುಖವಾಗಿರಲೆಂದು ದೇವರಲ್ಲಿ ಬೇಡಿಕೊಳ್ಳುತ್ತಾ, ನವ ವಧುವರರು ಹಿಡಿದ ಕಾಯಿಯ ಮೇಲೆ ಹಾಲಿನ ಧಾರೆ ಜೊತೆ ಕಣ್ಣೀರ ಧಾರೆಯನ್ನೂ ಎರೆದಳು. ●